ಹಗೂ ಐ ಪಿ ಸಿ ಕಲಂ 379 ರಂತೆ ಅಕ್ರಮ ಸಾಗಾಣಿಕೆ ಮೇಲೆ ಕ್ರಮ ಕೈಗೊಳ್ಳಲು ಜಿಲ್ಲೆಯ ಮರಳು ಮಾನಿಟರಿಂಗ್ ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ ಮರಳು ಸಾಗಾಣೆ ಮತ್ತು ಗಣಿಗಾರಿಕೆಯನ್ನು ನಿಯಂತ್ರಿಸಲಾಗಿದೆ

ಊ) ತಾಲ್ಲೂಕಿನಾದ್ಯಂತ ಪರವಾನಗಿ ಪಡೆದು ಗಣಿಗಾರಿಕೆ ನಡೆಯುತ್ತಿರುವ ಮಾಲೀಕರುಗಳಿಂದ 2006–07 ನೇ ಸಾಲಿನಲ್ಲಿ ಒಟ್ಟು ರೂ 105 ಲಕ್ಷಗಳ ರಾಜಧನವನ್ನು ವಸೂಲಿ ಮಾಡಲಾಗಿದೆ ವಿವರಗಳು ಕೆಳಕಂಡಂತಿವೆ

ಗೌರಿಬಿದನೂರು ತಾಲ್ಲೂಕು

ಕ್ರಮ ಸಂ	ಗುತ್ತಿಗೆದಾರರ ಹೆಸರು	ಪಾವತಿಸಿರುವ ರಾಜಧನ
1	ಶ್ರೀ ಯಲ್ಲಪ್ಪ (ಕಟ್ಟಡದ ಕಲ್ಲು)	ರೂ 10,000/–
2	ಮೆ॥ ಜ್ಯೋತಿ ಗ್ರಾನೈಟ್ಸ್ (ಅಲಂಕಾರಿಕ ಶಿಲೆ)	ರೂ 26,275/–
3	ಶ್ರೀ ಎಲ್ ಅನ್ವರ್ (ಮುಖ್ಯ ಖನಿಜ)	ರೂ 68,275/–
	ಒಟ್ಟು	**ರೂ 1,05,000/–**

1528 (2068) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಯಲಹಂಕದಿಂದ – ಸೋಮಂಜಿಪಲ್ಲಿಯ ರಾಜ್ಯ ಹೆದ್ದಾರಿಯು ತುಂಬಾ ಶಿಥಿಲಾವಸ್ಥೆಯಲ್ಲಿದ್ದು, ಸಂಚಾರಕ್ಕೆ ಯೋಗ್ಯವಾಗಿಲ್ಲದೇ ಇದ್ದುದರಿಂದ ಅಪಘಾತಗಳು ಹೆಚ್ಚಿನ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಯಾವುದೇ ಕ್ರಮ ಜರುಗಿಸದೇ ಇರುವುದು ನಿಜವಲ್ಲವೇ,

ಇ) ಈ ರಾಜ್ಯ ಹೆದ್ದಾರಿಯನ್ನು ಸಾರ್ವಜನಿಕರ, ನಾಗರೀಕರ ಹಿತದೃಷ್ಟಿಯಿಂದ ಯಾವಾಗ ಅಭಿವೃದ್ದಿಪಡಿಸಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಂದಿದೆ

ಆ) ಪ್ರಸ್ತಾವಿತ ರಸ್ತೆಯು ಬೆಂಗಳೂರು ಉತ್ತರ ತಾಲ್ಲೂಕಿನ ಸರಪಳಿ 13 60 ಕಿ ಮೀ ನಿಂದ ಪ್ರಾರಂಭಗೊಂಡು 88 10 ಕಿ ಮೀ ವರೆಗೆ ಕೋಲಾರ ಜಿಲ್ಲೆಯ ಗೌರಿಬಿದನೂರು ತಲ್ಲೂಕಿನಲ್ಲಿ ಕೊನೆಗೊಂಡು ಆಂಧ್ರಪ್ರದೇಶದಲ್ಲಿ ಮುಂದುವರೆಯುತ್ತದೆ ಸರಪಳಿ 13 60 ರಿಂದ 88 10 ಕಿ ಮೀ ನ ಕೆಲವು ಸರಪಳಿಗಳು ದುಸ್ಥಿತಿಯಲ್ಲಿರುತ್ತವೆ ಪ್ರಸ್ತಾವಿಕ ಯಲಹಂಕ–ಸೋಮಂಜಪಲ್ಲಿ ರಾಜ್ಯ ಹೆದ್ದಾರಿಯು ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದೊಡ್ಡಬಳ್ಳಾಪುರ ತಲ್ಲೂಕು ಹಾಗೂ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ (ರಾಜ್ಯ ಹೆದ್ದಾರಿ–9 ಯಲಹಂಕ–ಹಿಂದೂಪುರ ರಸ್ತೆ) ಹಾದು ಹೋಗಿ ಆಂಧ್ರಪ್ರದೇಶ ರಾಜ್ಯದಲ್ಲಿ ಮುಂದುವರೆಯುತ್ತದೆ ಒಟ್ಟಾರೆ ಉದ್ದ 74 50 ಕಿ ಮೀ ಇರುತ್ತದೆ (ಕಿ ಮೀ 13 60 ರಿಂದ 88 10 ಕಿ ಮೀ ವರೆಗೆ)

1) **ಬೆಂಗಳೂರು ಉತ್ತರ ತಾಲ್ಲೂಕು** ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸದರೀ ರಾಜ್ಯ ಹೆದ್ದಾರಿಯು ಸರಪಳಿ 13 60 ಕಿ ಮೀ ರಿಂದ ಪ್ರಾರಂಭಗೊಂಡು ಸರಪಳಿ 24 00 ಕಿ ಮೀ ವರೆಗೆ ಇರುತ್ತದೆ ಸದರೀ ಸರಪಳಿಯಲ್ಲಿ 3 ವರ್ಷಗಳ (2005–08) ರಾಜ್ಯ ಹೆದ್ದಾರಿ ನಿರ್ವಹಣೆ ಪ್ಯಾಕೇಜ್ ನಡಿ ಟೆಂಡರ್ ಆಧಾರದ ಮೇಲೆ ಮರು ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸಲಾಗಿದೆ

2) **ದೊಡ್ಡಬಳ್ಳಾಪುರ ತಾಲ್ಲೂಕು** ದೊಡ್ಡಬಳ್ಳಾಪುರ ತಲ್ಲೂಕಿನಲ್ಲಿ ಸದರೀ ರಾಜ್ಯ ಹೆದ್ದಾರಿಯು ಸರಪಳಿ 24 00 ಕಿ ಮೀ ರಿಂದ ಪ್ರಾರಂಭಗೊಂಡು ಸರಪಳಿ 56 30 ಕಿ ಮೀ ವರೆಗೆ ಇರುತ್ತದೆ ಸದರೀ ರಸ್ತೆ ಸರಪಳಿ 30 40 ರಿಂದ 35 40 ರವರೆಗೆ 3 ವರ್ಷಗಳ ರಾಜ್ಯ ಹೆದ್ದಾರಿ ನಿರ್ವಹಣಾ ಪ್ಯಾಕೇಜ್‌ನಡಿ ಟೆಂಡರ್ ಆಧಾರದ ಮೇಲೆ ಮರು ಡಾಂಬರೀಕರಣ ಕಾಮಗಾರಿಯನ್ನು ನಿರ್ವಹಿಸಲಾಗಿದೆ

2006–07 ನೇ ಸಾಲಿನ ಆಯವ್ಯಯದಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ವಾಹನ ದಟ್ಟಣೆ ಕಡಿಮೆಗೊಳಿಸುವ ಯೋಜನೆ – ಲೆಕ್ಕ ಶೀರ್ಷಿಕೆ 5054 ಅಡಿಯಲ್ಲಿ ಯಲಹಂಕ ಹಿಂದೂಪೂರ ರಸ್ತೆಯನ್ನು ಕಿ ಮೀ 13 60 ರಿಂದ

56 30 ರವರೆಗೆ ಅಭಿವೃದ್ಧಿಗೊಳಿಸಲು ರೂ 42 00 ಕೋಟಿಗಳಿಗೆ ಅನುಮೋದನೆ ನೀಡಿದ್ದು, ಗುತ್ತಿಗೆದಾರರನ್ನು ನಿಗಧಿಪಡಿಸಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ

3) ಗೌರಿಬಿದನೂರು ತಾಲ್ಲೂಕು ಗೌರಿಬಿದನೂರು ತಾಲ್ಲೂಕಿನಲ್ಲಿ ಸದರೀ ರಾಜ್ಯ ಹೆದ್ದಾರಿಯು ಸರಪಳಿ 56 30 ಕಿ ಮೀ ರಿಂದ ಪ್ರಾರಂಭಗೊಂಡು ಸರಪಳಿ 88 10 ಕಿ ಮೀ ವರೆಗೆ ಇರುತ್ತದೆ ಸದರೀ ಸರಪಳಿಯಲ್ಲಿ 3 ವರ್ಷಗಳ (2005–08) ರಾಜ್ಯ ಹೆದ್ದಾರಿ ನಿರ್ವಹಣೆ ಪ್ಯಾಕೇಜ್ನಡಿ ಟಂಡರ್ ಆಧಾರದ ಮೇಲೆ ಆಯ್ದ ಭಾಗಗಳಲ್ಲಿ ಒಟ್ಟು 10 57 ಕಿ ಮೀ ಮರು ಡಾಂಬರೀಕರಣ ಹಾಗೂ 2 88 ಕಿ ಮೀಗಳ ರಸ್ತೆಯನ್ನು ಬಲಪಡಿಸಿ ಡಾಂಬರೀಕರಣ ಮಾಡಲಾಗಿರುತ್ತದೆ 38 10 ಕಿ ಮೀನ ಕೆಲವು ಭಾಗಗಳು ದುಸ್ಥಿತಿಯಲ್ಲಿದ್ದು, ಈ ಕುರಿತು ಅನುದಾನ ಲಭ್ಯತೆಯನ್ನು ಆಧರಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು

ಇ) ಈ ರಾಜ್ಯ ಹೆದ್ದಾರಿಯನ್ನು ಸೂಕ್ತ ಅನುದಾನ ಲಭ್ಯತೆಯನ್ನು ಆಧರಿಸಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು

1529 (2069) ಶ್ರೀ ಎನ್ ಹೆಚ್ ಶಿವಶಂಕರ್ ರೆಡ್ಡಿ (ಗೌರಿಬಿದನೂರು) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಬೃಹದಾಕಾರವಾಗಿ ಬೆಳೆಯುತ್ತಿದ್ದು, ಯಾವ ಯಾವ ನಗರಗಳನ್ನು ಉಪ ನಗರಗಳನ್ನಾಗಿ ಅಭಿವೃದ್ಧಿ ಪಡಿಸಲಾಗುವುದು (ವಿವರ ಒದಗಿಸುವುದು)

ಆ) ಇದರ ಅಭಿವೃದ್ಧಿಗೆ ಸರ್ಕಾರವು ವ್ಯಯ ಮಾಡುತ್ತಿರುವ ಅನುದಾನವೆಷ್ಟು,

ಇ) ಯಾವ ಅವಧಿಯಲ್ಲಿ ಅಭಿವೃದ್ಧಿಗೊಳಿಸಿ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) 1) ನಂದಗುಡಿ ಹೋಬಳಿ ಹೊಸಕೋಟೆ ತಾಲ್ಲೂಕು

2) ರಾಮನಗರ, ಕಸಬಾ ಹೋಬಳಿ